# ಡುಯೆಟ್‌ನಿಂದ ಫುಟ್‌ಪಾತ್‌ಗೆ



ಮಾಸ್ಟರ್ ಕಿಶನ್ ಮತ್ತೊಮ್ಮೆ ಫುಟ್‌ಪಾತ್‌ನಲ್ಲಿ ನಿಂತಿದ್ದಾರೆ. ಟೀನೇಜ್‌ನಲ್ಲಿ ನಾಯಕನಾಗಿ ಹುಡುಗಿಯರ ಜೊತೆ ಡುಯೆಟ್ ಹಾಡಿದ್ದು ಪ್ರಯೋಜನ ಕಾಣದೆ, ಅವರೀಗ ಮತ್ತೆ ಫುಟ್‌ಪಾತ್ ಸೂತ್ರ ಕೈಗೆತ್ತಿಕೊಂಡಿದ್ದಾರೆ.

ಒಂಬತ್ತನೇ ವಯಸ್ಸಿನಲ್ಲಿ 'ಕೇರಾಫ್ ಫುಟ್‌ಪಾತ್' (2006) ಚಿತ್ರ ನಿರ್ದೇಶಿಸುವ ಮೂಲಕ ಚಿತ್ರಜಗತ್ತಿನ ಗಮನಸೆಳೆದಿದ್ದ ಕಿಶನ್, ಈಗ ಅದೇ ಸರಣಿಯ ಮತ್ತೊಂದು ಸಿನಿಮಾ ರೂಪಿಸುತ್ತಿದ್ದಾರೆ. 'ಕೇರಾಫ್ ಫುಟ್‌ಪಾತ್–2'ಕ್ಕೂ ಮೊದಲ ಚಿತ್ರಕ್ಕೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಅವರ ಸ್ಪಷ್ಟನೆ. 'ಇದು ವಿಶ್ವ ಸಿನಿಮಾ' ಎನ್ನುವುದು ಅವರ ಬಣ್ಣನೆ. ಏಕೆಂದರೆ ಚಿತ್ರದ ಕಥೆ ವಿಶ್ವದ ಯಾವ ಭಾಗದಲ್ಲಿ ಬೇಕಾದರೂ ನಡೆಯುವಂತಹದ್ದು. ಅಂದಹಾಗೆ, ಈ ಸಿನಿಮಾದ ಕಥೆ ಅವರಿಗೆ ಹೊಳೆದದ್ದು ಈಜಿಪ್ಟ್‌ನಲ್ಲಿ, ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ. ಅಪರಾಧ ಮಾಡಿ ರಿಮ್ಯಾಂಡ್ ಹೋಂನಲ್ಲಿ ಶಿಕ್ಷೆ ಅನುಭವಿಸಿ, ಅಲ್ಲಿಂದ ಹೊರಬರುವ ಮಕ್ಕಳ ಮನಸ್ಥಿತಿ ಹೇಗಿರುತ್ತದೆ? ಈ ಜಿಜ್ಞಾಸೆಯೇ ಸಿನಿಮಾ ಕಥನದ ರೂಪದಲ್ಲಿ ಕಿಶನ್ ಅವರಿಗೆ ಹೊಳೆದಿದೆ.

ಮಕ್ಕಳು ಅಪರಾಧಗಳನ್ನು ಯಾಕೆ ಮಾಡುತ್ತಾರೆ ಎನ್ನುವ ಬಗ್ಗೆ ಸ್ವಯಂ ಸೇವಾ ಸಂಘಟನೆಗಳೊಂದಿಗೆ ಅವರು ಚರ್ಚೆ ನಡೆಸಿದ್ದಾರಂತೆ. ಅಧ್ಯಯನ ರೂಪದ ಈ ಚರ್ಚೆ ಕೂಡ ಅವರ ಚಿತ್ರಕಥೆಯನ್ನು ಬಲಪಡಿಸಿದೆ. ಹಿಂದಿ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಫುಟ್‌ಪಾತ್ ನಿರ್ಮಿಸಲು ಕಿಶನ್ ಸಜ್ಜಾಗಿದ್ದಾರೆ. ಪ್ರದರ್ಶಕರಾಗಿ ಚಿತ್ರರಂಗದಲ್ಲಿ ಗುರ್ತಿಸಿಕೊಂಡಿರುವ ದೇವರಾಜ್ ಪಾಂಡೆ ಈ ಸಿನಿಮಾವನ್ನು ನಿರ್ಮಿಸುತ್ತಿದ್ದಾರೆ.

ಕಿಶನ್ ಅವರ ಚಿತ್ರದ ತಾರಾಗಣದಲ್ಲಿ ಕೆಲವು ವಿಶಿಷ್ಟ ಹೆಸರುಗಳೂ ಇವೆ. 'ಸಲಾಂ ಬಾಂಬೆ' ಚಿತ್ರದಲ್ಲಿ ಪಾನ್ ಶಾಪ್ ಮಾಲೀಕನ ಪಾತ್ರದಲ್ಲಿ ನಟಿಸಿದ್ದ ಶಫೀಕ್ ಸಯ್ಯದ್ 'ಕೇರಾಫ್ ಫುಟ್‌ಪಾತ್' ಮೂಲಕ ಬೆಳ್ಳಿತೆರೆಗೆ ಮರಳುತ್ತಿದ್ದಾರೆ. ಇಪ್ಪತ್ತೈದು ವರ್ಷಗಳ ನಂತರ ಅವರು ಸಿನಿಮಾದಲ್ಲಿ ನಟಿಸುತ್ತಿರುವುದು ವಿಶೇಷ. ಕಿಶನ್ ಹೇಳಿದ ಕಥೆ ಮತ್ತು ತಾವು ನಿರ್ವಹಿಸಲಿರುವ ಪಾತ್ರ ಅವರಿಗೆ ಥ್ರಿಲ್ ನೀಡಿವೆಯಂತೆ. ಮತ್ತೊಂದು ಮುಖ್ಯಪಾತ್ರದಲ್ಲಿ, ತಮಿಳು ನಟ ರಾಮ್‌ಚರಣ್ ಕಾಣಿಸಿಕೊಳ್ಳಲಿದ್ದಾರೆ.

---

# ರಾಗಿಣಿ ಸಂಭ್ರಮ



ನಟಿ ರಾಗಿಣಿ ಅವರ ದಸರೆ–ದೀಪಾವಳಿ ಸಡಗರ ದೊಡ್ಡದಾಗಿಯೇ ಇದೆ. ಈ ಸಂಭ್ರಮಕ್ಕೆ ಎರಡು ಕಾರಣಗಳಿವೆ. ಮೊದಲನೆಯದು ಅವರು ಪೊಲೀಸ್ ಅಧಿಕಾರಿಯಾಗಿ ನಟಿಸಿರುವ 'ರಾಗಿಣಿ ಐಪಿಎಸ್' ಚಿತ್ರ ತೆರೆಕಾಣಲು ಸಿದ್ಧವಾಗಿರುವುದು. ಮತ್ತೊಂದು ಕಾರಣ, ಹಿಂದಿ ಚಿತ್ರವೊಂದರ ಆಫರ್‌ನ ಮಾತುಕತೆ ನಡೆಯುತ್ತಿರುವುದು.

ಐಟಂ ಹಾಡುಗಳೂ ಸೇರಿದಂತೆ ಗ್ಲಾಮರ್‌ಗೆ ಅವಕಾಶ ಇರುವ ಹಾಡುಗಳಲ್ಲಿ ರಾಗಿಣಿ ಈವರೆಗೆ ಕಾಣಿಸಿಕೊಂಡಿರುವುದೇ ಹೆಚ್ಚು. ಈ ನಿಟ್ಟಿನಲ್ಲಿ 'ರಾಗಿಣಿ ಐಪಿಎಸ್' ಅವರ ಪಾಲಿಗೆ ಮಹತ್ವದ ಸಿನಿಮಾ. ಪೊಲೀಸ್ ಅಧಿಕಾರಿಣಿ ಎಂದಮೇಲೆ ಹಾಡುಗಳಿಗಿಂತಲೂ ಹೊಡೆದಾಟಕ್ಕೇ ಹೆಚ್ಚು ಒತ್ತು. ಈ ಸಾಹಸ ಸನ್ನಿವೇಶಗಳು ರಾಗಿಣಿ ಅವರಿಗೆ ಖುಷಿ ಕೊಟ್ಟಿವೆ. ಪಂಚಿಂಗ್ ಡೈಲಾಗ್‌ಗಳನ್ನು ಅವರು ಎಂಜಾಯ್ ಮಾಡಿಕೊಂಡು ಹೇಳಿದ್ದಾರೆ.

ಆನಂದ್ ಪಿ. ರಾಜು ನಿರ್ದೇಶನದ 'ರಾಗಿಣಿ ಐಪಿಎಸ್' ಚಿತ್ರದ ನಿರ್ಮಾಣ ಕೆ. ಮಂಜು ಅವರದು. ಮಂಜು ಅವರಿಗೆ ರಾಗಿಣಿ ಅವರನ್ನು ಕಂಡರೆ ಕೊಂಚ ಹೆಚ್ಚೇ ಅಕ್ಕರೆ. ಈ ಅಕ್ಕರೆಯಿಂದಲೇ ತಮ್ಮ ನೆಚ್ಚಿನ ನಾಯಕಿಗೆ ಪೊಲೀಸ್ ಸಮವಸ್ತ್ರವನ್ನು ಅವರು ತೊಡಿಸಿದ್ದಾರೆ. ಚಿತ್ರಕ್ಕೆ ಸೆನ್ಸಾರ್‌ನಿಂದ 'ಎ' ಪ್ರಮಾಣಪತ್ರ ದೊರೆತಿದ್ದು, ದೀಪಾವಳಿ ಆಸುಪಾಸಿನಲ್ಲಿ ರಾಗಿಣಿಯನ್ನು ತೆರೆ ಕಾಣಿಸುವ ಪ್ರಯತ್ನದಲ್ಲಿ ಮಂಜು ಅವರಿದ್ದಾರೆ.

ಇನ್ನು ಬಾಲಿವುಡ್ ವಿಷಯ. ಪ್ರಭುದೇವ ನಿರ್ದೇಶನದ ಹಿಂದಿ ಚಿತ್ರವೊಂದರಲ್ಲಿ ನಟಿಸಲು ರಾಗಿಣಿ ಅವರಿಗೆ ಆಫರ್ ಬಂದಿದೆಯಂತೆ. ಇದು ಸದ್ಯಕ್ಕಿನ್ನೂ ಮಾತುಕತೆಯ ಹಂತದಲ್ಲಿದ್ದು, ಎಲ್ಲವೂ ಅಂದುಕೊಂಡಂತೆ ಆದರೆ ರಾಗಿಣಿ ಬಾಲಿವುಡ್‌ನಲ್ಲೂ ಅದೃಷ್ಟ ಪರೀಕ್ಷಿಸಿಕೊಳ್ಳಲಿದ್ದಾರೆ.

■ ರಘು